ನಿಮ್ಮೊಡನೆ

ದೇಶದ ಜನಸಂಖ್ಯೆಯ ಅರ್ಧದಷ್ಟು ಜನ ಇಂದಿಗೂ ಶೌಚಕ್ಕೆ ಬಯಲನ್ನೇ ಅವಲಂಬಿಸಿದ್ದಾರೆ! ತಲೆಯ ಮೇಲೆ ಮಲ ಹೊತ್ತು ಸಾಗಿಸುವ ಪದ್ಧತಿ ಇನ್ನೂ ಜೀವಂತವಾಗಿದೆ. ಶೇ.61ರಷ್ಟು ಮನೆಗಳಲ್ಲಿ ಪ್ರತ್ಯೇಕ ಅಡುಗೆ ಕೋಣೆಗಳಿಲ್ಲ. ಶೇ.6 ರಷ್ಟು ಜನ ಇಂದಿಗೂ ಮನೆಯ ಹೊರಗೆ ಆಹಾರ ಬೇಯಿಸಿಕೊಳ್ಳುತ್ತಾರೆ. ಅಭಿವೃದ್ಧಿ ಫಲ ಸಮಾನ ಹಂಚಿಕೆಯಾಗಿಲ್ಲ ಎನ್ನುವುದಕ್ಕೆ ಈ ಮಾಹಿತಿಗಳು ಕೆಲ ಉದಾರಣೆಗಳಷ್ಟೆ.



# ಇನ್ನೊಂದು ಮುಖ!

ಭಾರತ ಅಭಿವೃದ್ಧಿ ಪಥದಲ್ಲಿದೆ. ಅತ್ಯಾಧುನಿಕತೆಯನ್ನು ಮೈಗೂಡಿಸಿಕೊಳ್ಳುತ್ತಿದೆ. 2020ರ ವೇಳೆಗೆ ಭಾರತ ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಹೊರ ಹೊಮ್ಮಲಿದೆ ಎಂಬ ಮಾತು ಕೇಳಿದಾಗ ಎಲ್ಲ ಭಾರತೀಯರಿಗೂ ಹೆಮ್ಮೆ ಎನಿಸುತ್ತದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಇಡೀ ಜಗತ್ತು ಬೆರಗುಗಣ್ಣುಗಳಿಂದ ನೋಡುತ್ತಿದೆ. ಜಾಗತೀಕರಣ ಹಾಗೂ ಮುಕ್ತ ಆರ್ಥಿಕ ನೀತಿಯ ಫಲ ಇದು. ಜಾಗತೀಕರಣ ಪ್ರಕ್ರಿಯೆ ಆರಂಭವಾದ ನಂತರ ದೇಶದ ಸ್ವರೂಪವೇ ಬದಲಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಬದಲಾವಣೆಯ ಗಾಳಿ ಬೀಸುತ್ತಿದೆ. ವಿಜ್ಞಾನ ಹಾಗೂ ತಂತ್ರಜ್ಞಾನದ ಹೊಸ ಆವಿಷ್ಕಾರಗಳನ್ನು ಬಳಸಿಕೊಳ್ಳುವ ಧಾವಂತ ಕಂಡುಬರುತ್ತಿದೆ. ಮುಂದುವರಿದ ದೇಶಗಳಲ್ಲಿರುವ ಸೌಲಭ್ಯಗಳು ಈಗ ಭಾರತದಲ್ಲೂ ಲಭ್ಯ. ದೇಶ ಸಂಕ್ರಮಣ ಕಾಲದಲ್ಲಿದೆ.

ಆದರೆ ಜಾಗತೀಕರಣ ಮತ್ತು ಮುಕ್ತ ಆರ್ಥಿಕ ನೀತಿಯ ಫಲಗಳನ್ನು ಸುಶಿಕ್ಷಿತರು, ನಗರವಾಸಿಗಳು ಹಾಗೂ ಮೇಲ್ವರ್ಗದ ಜನರು ಅನುಭವಿಸುತ್ತಿದ್ದಾರೆ. ಉನ್ನತ ಶಿಕ್ಷಣ ಪಡೆದವರಿಗೆ ಉದ್ಯೋಗ ಅವಕಾಶಗಳು ಹೆಚ್ಚಾಗಿವೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುವವರ ಆದಾಯವೂ ಹೆಚ್ಚಿದೆ. ಒಟ್ಟಾರೆ ವೇತನದಾರ ವರ್ಗಗಳಿಗೆ ಐಷಾರಾಮಿ ಸೌಲಭ್ಯಗಳನ್ನು ಒದಗಿಸಲು ಸೇವಾವಲಯ ಸನ್ನದ್ಧವಾಗಿ ನಿಂತಿದೆ. ಈ ವಲಯಕ್ಕೆ ಬಂಡವಾಳದ ಕೊರತೆ ಇಲ್ಲ. ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಸುಖಪಡುತ್ತಿರುವವರು ಮೇಲ್ಮಧ್ಯಮ ವರ್ಗದವರು. ಇಂಥವರನ್ನು ನೋಡಿದಾಗ ದೇಶ ನಿಜಕ್ಕೂ ಆಧುನಿಕವಾಗಿದೆ ಎಂಬ ಭಾವನೆ ಬರುತ್ತದೆ. ಆದರೆ ಅದು ಅರ್ಧ ಸತ್ಯ. ದೇಶದ ಇನ್ನೊಂದು ಮುಖ ಇದಕ್ಕೆ ತದ್ವಿರುದ್ಧವಾಗಿದೆ.

ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಸಾಧನೆ ಏನೇ ಇದ್ದರೂ ನಮ್ಮದು ಕೃಷಿ ಪ್ರಧಾನ ದೇಶ. ಇಂದಿಗೂ ನಿಜವಾದ ಭಾರತ ಇರುವುದು ಹಳ್ಳಿಗಳಲ್ಲೇ. ಗ್ರಾಮೀಣ ಭಾರತದ ಕೋಟ್ಯಂತರ ಜನರು ಕೃಷಿ ಹಾಗೂ ಅದರ ಪೂರಕ ವೃತ್ತಿಗಳನ್ನೇ ಅವಲಂಬಿಸಿದ್ದಾರೆ. ಗ್ರಾಮೀಣ ಹಾಗೂ ನಗರವಾಸಿ ಬಡವರ ಜೀವನ ಮಟ್ಟದಲ್ಲಿ ಹೆಚ್ಚಿನ ಸುಧಾರಣೆಯಾಗಿಲ್ಲ ಎನ್ನುವುದು ಮೇಲುನೋಟಕ್ಕೆ ಗೊತ್ತಾಗುವ ವಾಸ್ತವ. ದೇಶದ ಜನರ ಜೀವನ ಮಟ್ಟವನ್ನು ಅರಿಯಲು ಜನಗಣತಿ ಸಂದರ್ಭದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆ ಮಾಡಿದೆ. ಈ ಮಾಹಿತಿಗಳನ್ನು ಗಮನಿಸಿದರೆ ಗ್ರಾಮೀಣ ಭಾರತದಲ್ಲಿ ಹೆಚ್ಚಿನ ಬದಲಾವಣೆಗಳಾಗಿಲ್ಲ ಎನ್ನುವುದು ವೇದ್ಯವಾಗುತ್ತದೆ.

ದೇಶದ ಜನಸಂಖ್ಯೆಯ ಅರ್ಧದಷ್ಟು ಜನ ಇಂದಿಗೂ ಶೌಚಕ್ಕೆ ಬಯಲನ್ನೇ ಅವಲಂಬಿಸಿದ್ದಾರೆ! ತಲೆಯ ಮೇಲೆ ಮಲ ಹೊತ್ತು ಸಾಗಿಸುವ ಪದ್ಧತಿ ಇನ್ನೂ ಜೀವಂತವಾಗಿದೆ. ಆದರೆ ಅದರ ಪ್ರಮಾಣ (ಶೇ.1) ಕಡಿಮೆಯಷ್ಟೆ. ಶೇ.3.2 ರಷ್ಟು ಜನರು ಸಾರ್ವಜನಿಕ ಶೌಚಾಲಯ ಬಳಸುತ್ತಾರೆ. ಶೇ.44ರಷ್ಟು ಜನರಿಗೆ ಕೈಗೆಟುಕುವ ಸಾರಿಗೆ ಎಂದರೆ ಸೈಕಲ್. ಶೇ.62.5 ರಷ್ಟು ಜನರಿಗೆ ಆಹಾರ ಬೇಯಿಸಲು ಸೌದೆ, ಸೀಮೆಎಣ್ಣೆಯೇ ಉರುವಲು. ಶೇ.28.6 ರಷ್ಟು ಜನರು ಮಾತ್ರ ಅಡಿಗೆ ಅನಿಲ ಬಳಸುತ್ತಾರೆ. ಸ್ವಾತಂತ್ರ್ಯ ಬಂದು ಆರೂವರೆ ದಶಕಗಳು ಕಳೆದರೂ ದೇಶದ ಎಲ್ಲ ಜನರಿಗೆ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ. ಶೇ.36 ರಷ್ಟು ಜನರ ಮನೆಗಳಿಗೆ ನೀರಿನ ಪೂರೈಕೆ ಇಲ್ಲ. ಶೇ.18ರಷ್ಟು ಜನರು ಅರ್ಧ ಕಿ.ಮೀ ಗಿಂತ ಹೆಚ್ಚು ದೂರದಿಂದ ನೀರು ಹೊತ್ತು ತರುತ್ತಾರೆ. ದೇಶದ ಶೇ.32 ರಷ್ಟು ಜನರು ನೀರನ್ನು ತಾವೇ ಶುದ್ಧೀಕರಿಸಿಕೊಂಡು ಬಳಸುತ್ತಾರೆ. ಶೇ.61ರಷ್ಟು ಮನೆಗಳಲ್ಲಿ ಪ್ರತ್ಯೇಕ ಅಡುಗೆ ಕೋಣೆಗಳಿಲ್ಲ. ಶೇ.6 ರಷ್ಟು ಜನ ಇಂದಿಗೂ ಮನೆಯ ಹೊರಗೆ ಆಹಾರ ಬೇಯಿಸಿಕೊಳ್ಳುತ್ತಾರೆ. ಅಭಿವೃದ್ಧಿ ಫಲ ಸಮಾನ ಹಂಚಿಕೆಯಾಗಿಲ್ಲ ಎನ್ನುವುದಕ್ಕೆ ಈ ಮಾಹಿತಿಗಳು ಕೆಲ ಉದಾರಣೆಗಳಷ್ಟೆ.

ಆಶ್ಚರ್ಯದ ಬೆಳವಣಿಗೆ ಎಂದರೆ ದೇಶದ ಶೇ.53.2 ರಷ್ಟು ಜನರು ಸೆಲ್ ಫೋನ್‌ಗಳನ್ನು ಬಳಸುತ್ತಾರೆ! ಈ ವಿಷಯದಲ್ಲಿ ಗ್ರಾಮೀಣ ಜನರೂ ಹಿಂದೆ ಬಿದ್ದಿಲ್ಲ. ಶೇ.3.1ರಷ್ಟು ಜನರು ಇಂಟರ್ ನೆಟ್‌ಸಹಿತ ಕಂಪ್ಯೂಟರ್ ಬಳಸುತ್ತಾರೆ. ಶೇ.6.3 ರಷ್ಟು ಜನರು ಇಂಟರ್‌ನೆಟ್‌ರಹಿತ ಕಂಪ್ಯೂಟರ್ ಬಳಸುತ್ತಾರೆ. ಶೇ.16 ರಷ್ಟು ಜನರಿಗೆ ಟೆಲಿವಿಷನ್ ಸೌಲಭ್ಯವಿದೆ. ಸೆಲ್‌ಫೋನ್, ಟೀವಿ ಇತ್ಯಾದಿಗಳನ್ನು ಬಳಸಿಕೊಳ್ಳುವ ವಿಷಯದಲ್ಲಿ ಗ್ರಾಮೀಣ ಜನರು ಆಸಕ್ತಿ ತೋರಿದರೂ ನೈರ್ಮಲ್ಯದ ಸೌಲಭ್ಯಗಳು ಅವರಿಗೆ ಗಗನಕುಸುಮ ಎನ್ನುವುದು ವಿಚಿತ್ರವೇ ಸರಿ.

■ ಪ್ರೇಮಕುಮಾರ್ ಹರಿಯಬ್ಬೆ